ಕೊಪ್ಪಳ ಜಿಲ್ಲೆಯಲ್ಲಿ ಮಧ್ಯಮ ಏತ ನೀರಾವರಿ ಯೋಜನೆ.

1645(2029)

ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊಪ್ಪಳ ಜಿಲ್ಲೆಯ ರೈತರ ಬಹುದಿನಗಳ ಬೇಡಿಕೆಯಾದ ಬಟಗೇರಿ, ಬಹದ್ದೂರ ಬಂಡಿ ಹಾಗೂ ಅಳವಂಡಿ (ಸ್ಕೀಮ 1, 2 ಹಾಗೂ 3) ಈ ಮಧ್ಯಮ ಏತ ನೀರಾವರಿ ಯೋಜನೆಗಳು ಸರ್ಕಾರದ ಯಾವ ಹಂತದಲ್ಲಿದೆ.

ಆ. ಈ ಕುರಿತು ಅಂದಾಜು ವೆಚ್ಚ ತಯಾರಿಸಲಾಗಿದೆಯೇ : ಇದನ್ನು ಎಂದಿನಿಂದ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು:

ಇ. ಇದರಿಂದ ಲಭ್ಯವಾಗುವ ನೀರಿನ ಪ್ರಮಾಣವೆಷ್ಟು : (ಕೃಷಿಗೆ) ಹಾಗೂ ನೀರು ಒದಗುವ ಕೃಷಿ ಜಮೀನಿನ ಎಕರೆಗಳೆಷ್ಟು?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ಸರ್ಕಾರದ ಪರಿಶೀಲನೆಯಲ್ಲಿದೆ.

ಆ. ರೇಖಾ ಅಂದಾಜು ಪಟ್ಟಿಯನ್ನು ಮಾತ್ರ ತಯಾರಿಸಲಾಗಿದೆ. ಉದ್ದೇಶಿತ ಯೋಜನೆಯ ಬಗ್ಗೆ ಅಂತಿಮ ತೀರ್ಮಾನವನ್ನು ಅದರ ಸವಿವರ ಅಂದಾಜನ್ನು ನೀರಿನ ಲಭ್ಯತೆ, ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆಯ ದೃಷ್ಟಿಯಿಂದ ಪರಿಶೀಲಿಸಿದ ನಂತರ ತೆಗೆದುಕೊಳ್ಳಲಾಗುವುದು.

ಇ. ರೇಖಾ ಅಂದಾಜಿನ ಪ್ರಕಾರ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯಡಿಯಲ್ಲಿ 0.575 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 4000 ಎಕರೆ ಜಮೀನಿಗೆ ಹಾಗೂ ಅಲವಂಡಿ -ಬಟಗೇರಿ ಏತ ನೀರಾವರಿ ಆಡಿಯಲ್ಲಿ 2.92 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 20,000 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

ಕೊಪ್ಪಳ ಜಿಲ್ಲೆಯ ಸಿಂಗಟಾಲೂರು ಏತ ನೀರಾವರಿ ಕಾಮಗಾರಿ.

1646(2033)